ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

**ಸಿ.ಸಿ. ನಂ 1326/2019**

ಸಿ.ಡಬ್ಲ್ಯೂ -5 ಪಿ.ಡಬ್ಲ್ಯೂ - 3

ದಿಃ 20.12.2022 ರಂದು ಸಾಕ್ಷಿಗೆ ಪ್ರಮಾಣವಚನಬೋಧಿಸಲಾಯಿತು.

ಸಾಕ್ಷಿಯ ಹೆಸರು ವಾಸೇಗೌಡ

ತಂದೆಯ ಹೆಸರು ಲೇಟ್ ಕರಿಗೌಡ

ವಯಸ್ಸು ಸುಮಾರು 69 ವರ್ಷ

ಕೆಲಸ ವ್ಯವಸಾಯ

ವಾಸಸ್ಥಳ ಮೂಕನ ಹಳ್ಳಿ ಗ್ರಾಮ

4 ನೇ ಆರೋಪಿ ಗೈರು ಹಾಜರಾಗಿದ್ದು, ಅವರ ಗುರುತನ್ನು ತಕರಾರು ಮಾಡುವುದಿಲ್ಲ ಎಂಬ ಷರತ್ತಿಗೆ ಒಳಪಟ್ಟಂತೆ ಸಾಕ್ಷ್ಯ ತೆಗೆದುಕೊಳ್ಳಲಾಯಿತು.

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ಚಾಸಾ 1 ಮತ್ತು 2 ಗೊತ್ತು. 2019 ರಲ್ಲಿ ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ನರಸಿಂಹ ಸ್ವಾಮಿ ತಿಟ್ಟಿನ ಹಿಂಭಾಗ ಆರೋಪಿತರು ಹಾಗೂ ಚಾಸಾ 1 ಮತ್ತು 2 ರವರು ಜಮೀನನ್ನು ಅಳತೆ ಮಾಡಿಸುವ ಸಲುವಾಗಿ ನಮ್ಮನ್ನು ಜೊತೆಯಲ್ಲಿ ಕರೆದುಕೊಂಡು ಹೋದರು. ನಾವು ಜಮೀನಿನ ಬಳಿ ಹೋದಾಗ ಚಾಸಾ 1 ಮತ್ತು 2 ಹಾಗೂ ಆರೋಪಿತರ ಜಮೀನಿನ ಮದ್ಯ ಕಲ್ಲುಗಳನ್ನು ಹಾಕಲಾಗಿತ್ತು. ಆಗ ಚಾಸಾ 1 ರವರು ಆರೋಪಿತರು ಚಾಸಾ 1 ರವರ ಜಮೀನಿಗೆ ಸೇರಿದಂತೆ ಜಾಸ್ತಿ ಕಲ್ಲು ಹಾಕಿರುತ್ತಾರೆ ಎಂದು ಹೇಳಿದ್ದು, ಆಗ ನಾವು ಸರಿಪಡಿಸಿಸುವುದಾಗಿ ಹೇಳಿದೇವು. ಆಗ ಆರೋಪಿತರು ಹಾಗೂ ಚಾಸಾ 1 ರವರ ನಡುವೆ ಜಗಳ ಶುರುವಾಯಿತು. ಆಗ ನಾನು ಅಲ್ಲಿಂದ ವಾಪಸ್ಸು ಬಂದಿರುತ್ತೇನೆ. ಆರೋಪಿತರು ಚಾಸಾ 1 ಹಾಗೂ 2 ರವರ ಮೇಲೆ ಹಲ್ಲೆ ನಡೆಸಿದ್ದನ್ನು ನೋಡಿಲ್ಲ. ಅವಾಚ್ಯವಾಗಿ ನಿಂದಿಸಿದನ್ನು ನೋಡಿಲ್ಲ ಹಾಗೂ ಪ್ರಾಣ ಬೆದರಿಕೆಯನ್ನು ಹಾಕಿದ್ದನ್ನು ನೋಡಿಲ್ಲ. ನಾನು ಪೊಲೀಸರ

ಸಮಕ್ಷಮ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಕಲ್ಲನ್ನು ಇಂದೇ ಮೊದಲ ಬಾರಿಗೆ ನೋಡುತ್ತಿದ್ದೇನೆ.

**(ಈ ಹಂತದಲ್ಲಿ ಸಾಕ್ಷಿ ಪ್ರತಿಕೂಲ ಸಾಕ್ಷಿಯಾಗಿರುವುದರಿಂದ ಸ. ಸ. ಅ ರವರ ಪಾಟೀಸವಾಲಿಗಾಗಿ ಅನುಮತಿಯನ್ನು ಕೋರಿದ್ದು, ಆಲಿಸಿ ಅನುಮತಿಸಲಾಯಿತು.)**

**ಪಾಟೀಸವಾಲು ಶ್ರೀ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ **09.03.2019** ರಲ್ಲಿ ನಾನು ರೆಡ್ಡಿಕೊಪ್ಪಲು ಗ್ರಾಮಕ್ಕೆ ಹೋಗಿದ್ದಾಗ ಚಾಸಾ **1** ರವರ ತಾಯಿ ಸರ್ವೇ ನಂಬರ್ **46** ಪಿ **6** **2** ಎಕರೆ ಜಮೀನಿನಲ್ಲಿ **1** ನೇ ಆರೋಪಿ ತಂತಿ ಬೇಲಿಯನ್ನು ನೆಟ್ಟಿತ್ತು ಅದನ್ನು ಕೇಳಿದ್ದಕ್ಕೆ ಗಲಾಟೆ ಮಾಡಿ ಕಳುಹಿಸಿರುತ್ತಾರೆ ಆದ್ದರಿಂದ ಬಂದು ತಿರ್ಮಾನ ಮಾಡಿ ಕೊಡುವಂತೆ ಕೇಳಿದ್ದರು ಎಂದರೆ ಸರಿ.

ಮಾರನೇಯ ದಿನ ದಿಃ **10.03.2019** ರಂದು ಬೆಳಿಗ್ಗೆ **08.00** ಗಂಟೆ ಸಮಯದಲ್ಲಿ ಸಾಕ್ಷಿ **1** , **2** , ಗ್ರಾಮದ ಮುಖಂಡರಾದ ಚಾಸಾ **6** ರಿಂದ **8** ರವರು ಜಮೀನಿಗೆ ಹೋಗಿದೀರಿ ಎಂದರೆ ಸರಿ. ಆಗ ಚಾಸಾ **1** ರವರು **1** ನೇ ಆರೋಪಿಯು ಹಾಕಿದ ತಂತಿ ಬೆಲಿಯನ್ನು ನಮಗೆ ತೊರಿಸುತ್ತಿದ್ದಾಗ **1** ನೇ ಆರೋಪಿ ಅಲ್ಲಿ ಗೆ ಬಂದು ಚಾಸಾ **1** ರವವನ್ನು ಉದ್ದೇಶಿಸಿ ಬೋಳಿಮಗನೇ, ಗ್ರಾಮದ ಮುಖಂಡರನ್ನು ಕರೆದುಕೊಂಡು ಬಂದರೆ ನಿನಗೆ ಜಮೀನು ಬಿಡತಿನಾ ಎಂದು ನ್ಯಾಯಾಲಯದ ಮುಂದಿರುವ ಕಲನ್ನು ಎತ್ತಿಕೊಂಡು ಚಾಸಾ **1** ರವರ ತಲೆಯ ಮುಂಭಾಗಕ್ಕೆ ಹೊಡೆದು ರಕ್ತ ಗಾಯ ಪಡಿಸಿದನು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. **2** ಮತ್ತು **3** ನೇ ಆರೋಪಿತರು ಚಾಸಾ **1** ರವರನ್ನು ತಬ್ಬಿ ಹಿಡಿದು ಮೈಕೆಗೆ ಹೊಡೆದು ಸಾಧಾರಣ ಸ್ವರೂಪದ ನೊವುಂ ಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ **2** ರವರು ಜಗಳ ಬಿಡಿಸಲು ಜಹೋದಾಗ **4** ನೇ ಆರೋಪಿ ಕೈಗಳಿಂದ ಮೈಕೆಗೆ ಹೊಡೆದು ನೊವುಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ ನೀವು ಚಾಸಾ **6** ರಿಂದ **8** ರವರು ಜಗಳವನ್ನು ಬಿಡಿಸಿರುತ್ತೀರಾ ಎಂ ದರೆ ಸಾಕ್ಷಿ ನಾವು ಜಗಳ ಶುರುವಾಗುತ್ತಲೇ ವಾಪಸ್ಸು ಬಂದೆ ಎಂದು ಹೇಳುತ್ತಾರೆ. ಆರೋಪಿತರು ಚಾಸಾ **1** ಮತ್ತು **2** ರವರಿಗೆ

ಕೊಲೆ ಮಾಡಾುವುದಾಗಿ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ.

ಈ ಮೇಲೆ ಹೇಳಿದಂತೆ ಪೊಲೀಸರ ಸಮಕ್ಷಮ ಹೇಳಿಕೆಯನ್ನು ನೀಡಿರುತ್ತೀರಾ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ- 3 ಎಂದು ಗುರುತಿಸಲಾಯಿತು. ಆರೋಪಿತರು ನಿಮ್ಮ ಊರಿನವರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ಪಾಟೀಸವಾಲು, ಇಲ್ಲ ಎಂದು ತಿಳಿಸಿರುತ್ತಾರೆ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು